**ಎಂ ವಿ ಸಿ 1069/2024 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿ: 14.10.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಜೆ ಎ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಅಪರಾಧ ಸಂಖ್ಯೆ 52/2024 ರಲ್ಲಿನ ಪ್ರಥಮ ವರ್ತಮಾನ ವರದಿ, ದೂರು, ಸ್ಥಳ ಮಹಜರು, ಅಮಾನತ್ತು ಪಂಚನಾಮೆ, ಮೋಟಾರು ವಾಹನ ಅಪಘಾತ ವರದಿ, ಗಾಯದ ಪ್ರಮಾಣಪತ್ರ, ಚಾರ್ಜಶೀಟ್, ಒಂದು ಬಿಲ್ಲು, ಸಲಹಾ ಚೀಟಿ, ಒಂದು ಎಕ್ಸರೇ ಹಾಜರುಪಡಿಸಿರುತ್ತೇನೆ. ಅವುಗಳನ್ನು ಅನುಕ್ರಮವಾಗಿ ನಿಶಾನೆ ಪಿ 1 ರಿಂದ 10 ಎಂದು ಗುರುತಿಸಲಾಯಿತು.

ಆಧಾರ್ ಕಾರ್ಡ, ಪಾನ್ ಕಾರ್ಡ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಮೂಲ ದಾಖಲಾತಿಗಳು ಹಾಗೂ ಅವುಗಳ ನೋಟರೀಕೃತ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದೇನೆ. ಮೂಲ ದಾಖಲೆಗಳನ್ನು ನಕಲುಗಳೊಂದಿಗೆ ತಾಳೆ ಮಾಡಿ ಮೂಲ ದಾಖಲೆಗಳನ್ನು ಹಿಂತಿರುಗಿಸಿ ನಕಲುಗಳನ್ನು ನಿಶಾನೆ ಪಿ 11 ರಿಂದ 13 ಎಂದು ನಿಶಾನಿಸಲಾಯಿತು.

*ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ನೀಡಲಾಯಿತು.*

***(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)***

***ಸಾ ಓ ಹೇ ಸ ಒ***

***(ಬಾಬು ಎನ್)***
***1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,***
***ಪಾಂಡವಪುರ***